ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1479

ಉತ್ತರಿಸಬೇಕಾದ ದಿನಾಂಕ : 17.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ		ಉತ್ತರಗಳು
ಅ	ರಾಜ್ಯದ ರೈತರಿಗೆ ಮತ್ತು ಸಾಕಾಣಿಕೆದಾರರಿಗೆ ಉದ್ಯೋಗ ಒದಗಿಸುವ ಕುರಿ ಸಾಕಾಣಿಕೆಯಲ್ಲಿ ಕುರಿ ಮಾಂಸ ಮತ್ತು ಗೊಬ್ಬರಕ್ಕೆ ಹೆಚ್ಚಿನ ಬೇಡಿಕೆ ಇರುವುದು ನಿಜವೇ; (ವಿವರ ನೀಡುವುದು)	**ಹೌದು.** **ಕುರಿ ಮಾಂಸ ಮತ್ತು ಗೊಬ್ಬರಕ್ಕೆ ರಾಜ್ಯದಲ್ಲಿ ಹೆಚ್ಚಿನ ಬೇಡಿಕೆ ಇದ್ದು, ವಿವರಗಳು ಈ ಕೆಳಕಂಡಂತಿವೆ.** ➢ ಕರ್ನಾಟಕ ರಾಜ್ಯದಲ್ಲಿ 2019ನೇ ಜಾನುವಾರು ಗಣತಿ ಪ್ರಕಾರ 110.5 ಲಕ್ಷ ಕುರಿಗಳಿವೆ. ➢ ವರ್ಷಕ್ಕೆ ಅಂದಾಜು 11.00 ಲಕ್ಷ ಟನ್ ಕುರಿ ಗೊಬ್ಬರ ಉತ್ಪಾದನೆಯಾಗುತ್ತದೆ. ➢ ವರ್ಷಕ್ಕೆ ಅಂದಾಜು 35 ಲಕ್ಷ ಕುರಿಗಳನ್ನು ಮಾಂಸಕ್ಕಾಗಿ ವಧಿಸಲಾಗುತ್ತಿದೆ, ಅಂದಾಜು 42 ಸಾವಿರ ಟನ್ ಕುರಿ ಮಾಂಸ ಉತ್ಪಾದನೆಯಾಗುತ್ತದೆ. ➢ ಐ.ಸಿ.ಎಮ್.ಆರ್ ಪ್ರಕಾರ ವರ್ಷಕ್ಕೆ ಒಬ್ಬರಿಗೆ 11 ಕೆ.ಜಿ ಮಾಂಸ ಉಪಯೋಗಿಸಬೇಕೆಂದು ಶಿಫಾರಸ್ಸು ಇದ್ದು, ಪ್ರಸ್ತುತ ಒಬ್ಬರಿಗೆ 4.99 ಕೆ.ಜಿ ಮಾಂಸ ಲಭ್ಯವಿದೆ. ಒಟ್ಟಾರೆ ರಾಜ್ಯಕ್ಕೆ 5.5 ಲಕ್ಷ ಟನ್ ಮಾಂಸ ವರ್ಷಕ್ಕೆ ಅವಶ್ಯವಿರುತ್ತದೆ
ಆ	ರಾಜ್ಯದಲ್ಲಿನ ರೈತರು ಮತ್ತು ಕುರಿ ಸಾಕಾಣಿಕೆದಾರರು ಹಳೆಯ, ನೂತನವಲ್ಲದ ಮತ್ತು ಲಾಭದಾಯಕವಲ್ಲದ ಕುರಿಸಾಕಾಣಿಕೆ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ಅವರ ಪರಿಶ್ರಮ ಮತ್ತು ಬಂಡವಾಳ ಹೂಡಿಕೆಗೆ ತಕ್ಕಂತೆ	ರಾಜ್ಯದಲ್ಲಿ ಹಿಂದಿನಿಂದಲೂ ಸಾಂಪ್ರಾದಾಯಿಕವಾಗಿ ಕುರಿ ಸಾಕಾಣಿಕೆ ಮಾಡಲಾಗುತ್ತಿದ್ದು, ಈ ವಿಧಾನದಲ್ಲಿ ಲಾಭಾಂಶ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಾರಣ ವೈಜ್ಞಾನಿಕವಾಗಿ ಕುರಿ ಸಾಕಾಣಿಕೆಯ ಮೂಲಕ ಕುರಿಗಾರರ ಲಾಭಾಂಶವನ್ನು ಹೆಚ್ಚಿಸುವುದಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿದ್ದು, ವಿವರಗಳನ್ನು <u>ಅನುಬಂಧದಲ್ಲಿ</u> ಲಗತ್ತಿಸಿದೆ.

	ಲಾಭದಾಯಕವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ರೂಪಿಸಿರುವ ಕಾರ್ಯಕ್ರಮ ಮತ್ತು ಯೋಜನೆಗಳೇನು; (ವಿವರ ನೀಡುವುದು)	
ಇ	ಕುರಿ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಸಂಶೋಧನೆ ಸಂಸ್ಥೆಯಾದ Central Sheep Training Centre ನ್ನು ರಾಜ್ಯದಲ್ಲಿ ಸ್ಥಾಪಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆಯೇ; ಇಲ್ಲದಿದ್ದಲ್ಲಿ, ಈಗಲಾದರೂ ಪ್ರಸ್ತಾವನೆ ಸಲ್ಲಿಸಲು ಮುಂದಾಗುವುದೇ?	ಪ್ರಸ್ತುತ Central Sheep Training Centre ಸಂಸ್ಥೆಯನ್ನು ರಾಜ್ಯದಲ್ಲಿ ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿರುವುದಿಲ್ಲ. ಆದರೆ, ಈ ಸಂಸ್ಥೆ ವತಿಯಿಂದ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ತರಬೇತಿ ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ. ಆದರೆ ಪ್ರಸ್ತುತ ಕೇಂದ್ರೀಯ ಉಣ್ಣೆ ಅಭಿವೃದ್ಧಿ ಮಂಡಳಿ, ಜೋದ್‌ಪುರ ಇವರ ಧನ ಸಹಯೋಗದೊಂದಿಗೆ ಈ ಕೆಳಕಂಡ ತರಬೇತಿಗಳನ್ನು ನೀಡಲಾಗುತ್ತಿದೆ. 1. ಕುರಿ ಸಾಕಾಣಿಕೆಯ ಬಗ್ಗೆ ವೈಜ್ಞಾನಿಕ ತರಬೇತಿ. 2. ಕುರಿಗಳಲ್ಲಿ ಕೃತಕ ಗರ್ಭಧಾರಣೆ ಬಗ್ಗೆ ತರಬೇತಿ. 3. ಯಾಂತ್ರಿಕೃತ ಉಣ್ಣೆ ಕಟಾವಣೆ ತರಬೇತಿ. 4. ಉಣ್ಣೆ ವಸ್ತುಗಳ ತಯಾರಿಕಾ ತರಬೇತಿ ಪಶುಪಾಲನಾ ಇಲಾಖೆಯ ತರಬೇತಿ ಕೇಂದ್ರಗಳಲ್ಲಿಯು ಕೂಡ ರೈತರಿಗೆ ವೈಜ್ಞಾನಿಕ ಕುರಿ ಸಾಕಾಣಿಕಾ ತರಬೇತಿ ನೀಡಲಾಗುತ್ತಿದೆ.

ಪಸಂಮೀ ಇ-98 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು

ಅನುಬಂಧ- I

ಕುರಿ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮ / ಯೋಜನೆಗಳ ವಿವರಗಳು:

1	ತಳಿ ಸಂವರ್ಧನೆಗಾಗಿ ಸುಧಾರಿತ ತಳಿಯ ಟಗರು / ಹೋತಗಳನ್ನು ಖರೀದಿಸಲು ಆರ್ಥಿಕ ನೆರವು; ರಾಜ್ಯದಲ್ಲಿನ ಕುರಿ / ಮೇಕೆಗಳ ಸಂತತಿಯನ್ನು ಹೆಚ್ಚಿಸುವುದು ಹಾಗೂ ಸ್ಥಳೀಯ ಕುರಿ / ಮೇಕೆಗಳನ್ನು ಮೇಲ್ದರ್ಜೆಗೇರಿಸುವುದರ ಮೂಲಕ ಮಾಂಸ ಮತ್ತು ಉಣ್ಣೆ ಉತ್ಪಾದನೆಯನ್ನು ವೃದ್ಧಿಸಲು ತಳಿ ಸಂವರ್ಧನೆಗಾಗಿ ಸುಧಾರಿತ ತಳಿಯ ಟಗರು / ಹೋತಗಳನ್ನು ಖರೀದಿಸಿ, ಬಳಸಲು ರೈತರಿಗೆ ಸಹಾಯಧನ ನೀಡಲಾಗುತ್ತಿದೆ.
2	ಉಚಿತ ಜಂತುನಾಶಕ ಔಷಧೋಪಚಾರ : ರಾಜ್ಯದಲ್ಲಿನ ಕುರಿ/ಮೇಕೆಗಳಲ್ಲಿನ ಒಳ ಮತ್ತು ಹೊರ ಪರೋಪ ಜೀವಿಗಳನ್ನು ನಿಯಂತ್ರಿಸಿ, ಅವುಗಳ ಆರೋಗ್ಯ ರಕ್ಷಣೆ ಮಾಡಲು ಉಚಿತ ಜಂತುನಾಶಕ ಔಷಧೋಪಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
3	ಕುರಿ/ಮೇಕೆಗಳಿಗಾಗಿ ಸುಧಾರಿತ ತಳಿಯ ವಿವಿಧ ಮೇವಿನ ಬೆಳೆಗಳನ್ನು ಬೆಳೆಯಲು ರೈತರಿಗೆ ಉತ್ತೇಜನ ನೀಡುವುದು.
4	ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸ್ಥಾಪನೆ ಮತ್ತು ಸಹಕಾರ ಸಂಘಗಳಿಗೆ ಒಂದಾವರ್ತಿ ಪ್ರೋತ್ಸಾಹಧನ; ಸಂಘಗಳು ಪ್ರಾರಂಭವಾಗಿ ಮೂರು ವರ್ಷಗಳಾಗಿದ್ದು, ಸಮರ್ಥವಾಗಿ ಕುರಿಗಾರರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ಮತ್ತು ಸಹಕಾರ ಇಲಾಖೆ ನಿಗದಿಪಡಿಸಿದ ಆರ್ಥಿಕ ಶಿಸ್ತನ್ನು ರೂಢಿಸಿಕೊಂಡಿರುವ ಸಂಘಗಳಿಗೆ ತಲಾ ರೂ. ಐದು ಲಕ್ಷಗಳನ್ನು ಒಂದಾವರ್ತಿ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.
5	ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ: ನಿಗಮದಲ್ಲಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟಜಾತಿ/ಪಂಗಡದ ಸದಸ್ಯರುಗಳಿಗೆ ಹಾಗೂ ಸಂಘಗಳು ಇಲ್ಲದೇ ಇರುವ ಪ್ರದೇಶಗಳಲ್ಲಿ ಆಸಕ್ತ ಪರಿಶಿಷ್ಟಜಾತಿ/ಪಂಗಡದ ಫಲಾನುಭವಿಗಳಿಗೆ ಕುರಿ / ಮೇಕೆ (6+1) ಘಟಕಗಳನ್ನು ಒದಗಿಸುವುದು. ಘಟಕದ ವೆಚ್ಚದಲ್ಲಿ ಶೇಕಡಾ 90 ರಷ್ಟನ್ನು ಸಹಾಯಧನವಾಗಿ ಹಾಗೂ ಉಳಿದ ಶೇ.10 ರಷ್ಟನ್ನು ಬ್ಯಾಂಕ್ ಸಾಲ ಅಥವಾ ಫಲಾನುಭವಿಗಳ ವಂತಿಕೆ ರೂಪದಲ್ಲಿ ಪಡೆದು ಅನುಷ್ಠಾನಗೊಳಿಸಲಾಗುವುದು.
6	ಕುರಿಗಾರರಿಗೆ ಪರಿಕರಗಳ ಕಿಟ್ ವಿತರಣೆ– ಸದರಿ ಕಾರ್ಯಕ್ರಮದಡಿ ನಿಗಮದಲ್ಲಿ ನೊಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ವಲಸೆ/ಅರೆವಲಸೆ ಕುರಿಗಾರರಿಗೆ ಪ್ರತಿ ಘಟಕಕ್ಕೆ ರೂ. 17202/– ವೆಚ್ಚದಲ್ಲಿ ಪರಿಕರಗಳ ಕಿಟ್ ಟೆಂಟ್, ಸೋಲಾರ್ ಟಾರ್ಚ್, ರೈನ್ ಕೋಟ್, ರಬ್ಬರ್ಪ್ಲೋರ್ ಮ್ಯಾಟ್)ಗಳನ್ನು ಉಚಿತವಾಗಿ ಪೂರೈಸಲಾಗುವುದು.
7	ಕುರಿ ಮತ್ತು ಉಣ್ಣೆ ಸುಧಾರಣೆ ಯೋಜನೆ (SWIS) ಕುರಿಗಳಿಗೆ ಉಚಿತವಾಗಿ ಜಂತುನಾಶಕ ಔಷಧೋಪಚಾರ, ವೈಜ್ಞಾನಿಕ ಕುರಿ ಸಾಕಾಣಿಕೆ ಕುರಿತು ತರಬೇತಿ ನೀಡುವುದು ಮತ್ತು ಯಾಂತ್ರೀಕೃತ ಉಣ್ಣೆ ಕಟಾವಣೆ ಯಂತ್ರಗಳನ್ನು ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಗೆ ಉಚಿತವಾಗಿ ಪೂರೈಸಲಾಗುವುದು.

8	ರಾಷ್ಟ್ರೀಯ ಜಾನುವಾರು ಮಿಶನ್ (NLM); ಅತ್ಯಂತ ರುಚಿಕರ ಮತ್ತು ಸ್ವಾದಿಷ್ಠಭರಿತ ಮಾಂಸಕ್ಕೆ ವಿಶ್ವದಲ್ಲಿಯೇ ಪ್ರಖ್ಯಾತಿ ಹೊಂದಿರುವ ಕರ್ನಾಟಕ ರಾಜ್ಯದ ಹೆಮ್ಮೆಯ ಬಂಡೂರು ತಳಿಯ ಕುರಿಗಳ ಸಂತತಿಯನ್ನು ವೃದ್ಧಿಸಲು ರಾಷ್ಟ್ರೀಯ ಜಾನುವಾರು ಮಿಶನ್ ಯೋಜನೆಯಡಿ ಬಂಡೂರು ತಳಿ ಕುರಿಯ ಮೂಲ ಸ್ಥಾನವಾದ ಮಂಡ್ಯ ಹಾಗೂ ಚಾಮರಾಜನಗರ, ಮೈಸೂರು ಮತ್ತು ರಾಮನಗರ ಜಿಲ್ಲೆಗಳ ಆಯ್ದ ಆರು ತಾಲ್ಲೂಕುಗಳಲ್ಲಿ ಶುದ್ಧ ಬಂಡೂರು ತಳಿ ಕುರಿಗಳನ್ನು ಸಾಕಾಣಿಕೆ ಮಾಡುತ್ತಿರುವ ಪ್ರಗತಿಪರ ಕುರಿಗಾರರಿಂದ ಉತ್ತಮ ದರ್ಜೆಯ ಟಗರುಗಳನ್ನು ಆಯ್ಕೆ ಮಾಡಿ, ಖರೀದಿಸಿ ಇವುಗಳನ್ನು ತಳಿ ಸಂವರ್ಧನೆಗಾಗಿ (ಕೃತಕ/ ನೈಸರ್ಗಿಕ ಗರ್ಭಧಾರಣೆ ಮೂಲಕ) ಹಾಲಿ ಬಂಡೂರು ತಳಿ ಕುರಿ ಸಾಕಾಣಿಕೆ ಮಾಡುತ್ತಿರುವ ಕುರಿಗಾರರಿಗೆ ವಿತರಿಸಲಾಗುತ್ತಿದೆ. ಅಲ್ಲದೇ ಈ ಕುರಿಗಳ ಪೋಷಣೆಗಾಗಿ ಉಚಿತವಾಗಿ ಸಮತೋಲನ ಪೌಷ್ಟಿಕ ಆಹಾರ ನೀಡುವುದು ಹಾಗೂ ಜಂತುನಾಶಕ ಔಷದೋಪಚಾರ, ಲಸಿಕೆ ಹಾಕುವ ಮೂಲಕ ಆರೋಗ್ಯ ಸಂರಕ್ಷಣೆ ಮಾಡಲಾಗುತ್ತಿದೆ. ಇದರಿಂದಾಗಿ ಈ ಕುರಿಗಳನ್ನು ಮೇಲ್ದರ್ಜೆಗೇರಿಸಿ, ಅವುಗಳಿಂದ ಅಧಿಕ ಮಾಂಸ ಉತ್ಪಾದನೆ ಮಾಡುವುದರ ಮೂಲಕ ಕುರಿಗಾರರ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ನೆರವಾಗುತ್ತಿದೆ.
9	ಸಹಕಾರ ಸಂಘಗಳಲ್ಲಿ ಉಣ್ಣೆ ಮತ್ತು ಚರ್ಮ ಸಂಗ್ರಹಣಾ ಗೋದಾಮುಗಳ ನಿರ್ಮಾಣ ರಾಜ್ಯದಲ್ಲಿ ಅಧಿಕ ಉಣ್ಣೆ ಉತ್ಪಾದನೆಯಾಗುತ್ತಿರುವ ಜಿಲ್ಲೆಗಳಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಗೆ ಉಣ್ಣೆ ಮತ್ತು ಚರ್ಮ ಸಂಗ್ರಹಣಾ ಗೋದಾಮುಗಳ ನಿರ್ಮಾಣ ಮಾಡಲು ಒಟ್ಟು ಘಟಕದ ವೆಚ್ಚ ರೂ. 15 ಲಕ್ಷ ರೂ.ಗಳ ಶೇ. 75 ರಷ್ಟು (11.25 ಲಕ್ಷ ರೂ.) ಸಹಾಯಧನ ನೀಡಲಾಗುವುದು. ಉಳಿದ ಶೇ.25 ರಷ್ಟು (ರೂ.3.75 ಲಕ್ಷಗಳು)ಮೊತ್ತವನ್ನು ಸಂಘವು ಭರಿಸಬೇಕಾಗುತ್ತದೆ. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ನೊಂದಾಯಿಸಿರುವ 30X40 ಅಡಿ ನಿವೇಶನ ಹೊಂದಿರುವ ಮತ್ತು ಶೇ.25ರಷ್ಟು (ರೂ.3.75 ಲಕ್ಷ) ವಂತಿಕೆ ನೀಡಲು ಅರ್ಹವಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.